# ಶ್ರೀ ಮಧ್ವರಾಯರ ಸೇವೆ ದೊರಕುವುದು ಜನುಮ ಸಫಲ

1. Ref.: Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** This is from the book: Purandara Sahitya Darshana, Samputa 2, Adhyatma Darshana edited by Prof. S.K. Ramachandra Rao

ರಾಗ: ಸಾವೇರಿ ತಾಳ: ಅಟ್ಟ

ಶ್ರೀ ಮಧ್ವರಾಯರ ಸೇವೆ ದೊರಕುವುದು
ಜನುಮ ಸಫಲ ಕಾಣಿರೋ ॥ ಪ ॥

ಶ್ರೀಮದಾನಂದ ತೀರ್ಥರ ಪಾದವ ನೆನೆವರು
ಸಾಮಾನ್ಯ ಸುರರು ಕಾಣೆ - ಬೊಮ್ಮನ ಆಣೆ ॥ ಅಪ ॥

ಜಗತು ಸತ್ಯವು ಅಲ್ಲ ಜಡ-ಜೀವ ಭೇದವಲ್ಲ
ಅಗುಣನು ಪರಬೊಮ್ಮನು
ಹೀಗೆ ನುಡಿವ ಜನರ ನಿಗಮ ಶಾಸ್ತ್ರದಿ ಗೆದ್ದು
ಜಗ ಸತ್ಯ ಸಗುಣ ಬ್ರಹ್ಮ ಎಂದು ಪೇಳುವ ॥ 1 ॥

ಹರಿ ಸರ್ವೋತ್ತಮ ನಿತ್ಯ ತರುವಾಯ ರಮಾದೇವಿ
ತರುವಾಯ ವಿಧಿ ಪ್ರಾಣರು
ಸರಸ್ವತಿ ಭಾರತಿ ಗರುಡ ಅನಂತ ರುದ್ರ
ತರುವಾಯ ಆರು ದೇವಿಗಳು ॥ 2 ॥

ಸೌಪರ್ಣಿ ವಾರುಣಿದೇವಿ ಅಪರ್ಣಾದೇವಿಯರು ಸಮರು
ದ್ರುಪದಿ ಮನ್ವಾದಿಗಳು
ಈ ಪರಿ ತಾರತಮ್ಯ ಜಪ-ಧ್ಯಾನಾರ್ಚನೆಯಿಂದ
ಅಪವರ್ಗದನ ಸೇವೆಯ ಮಾಡಿರೊ ಎಂಬ ॥ 3 ॥

ಒಂದೊಂದು ಯುಗದಲಿ ಅನಂತ ಸೇವೆಯ ಮಾಡಿ

ಚೆಂದದಿಂದಲಿ ಲಾಲಿಸಿ
ಇಂದಿರಾ ರಮಣ ಗೋವಿಂದನೇ ದೈವವೆಂದು
ಸಂದೇಹವಿಲ್ಲದೆ ಸಾಧಿಸಿ - ಮಾಯಿೀ ಸೋಲಿಸಿ ॥ 4 ॥

ಹಿಮಗಿರಿಯಿಂದ ಸೇತುವೆಯ ಪರ್ಯಂತರ
ಭೃಮಿಸುತ ಸುಜನರಿಗೆ
ಕ್ರಮ ತತ್ತ್ವ ಬೋಧಿಸಿ ಕಮಲನಾಭನ ಮೂರ್ತಿ
ಕ್ರಮವರಿತು ಸ್ಥಾಪಿಸಿ ಪೂಜಿಸಿರೆಂದ ॥ 5 ॥

ಭೂ ತಳದೊಳು ರೌಪ್ಯ ಪುರದಿ ನೆಲಸಿ ಗೆದ್ದು
ಧಾತ್ರೀ ಮುದ್ರೆಯ ತೋರಿಸಿ
ಈತನೇ ಹನುಮಂತ ಈತನೇ ಭೀಮಸೇನ
ಈತನೇ ಭವಿಷ್ಯದ ಬ್ರಹ್ಮ ಜೀವೋತ್ತಮ ॥ 6 ॥

ಶ್ರೀಮದನಂತನೇ ಅನಂತ ಕಾಲಕೆಯೆಂದು
ಯಮಕ ಭಾರತ ತೋರಿಸಿ
ಸ್ವಾಮಿ ಸರ್ವಾಂತರ್ಯಾಮಿ ಸರ್ವ ಗುಣ ಪೂರ್ಣನೆಂದು
ಪ್ರೇಮಿ ಪುರಂದರ ವಿಠಲನ ದಾಸನಾದ ॥ 7 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಸಾಮಾನ್ಯ ಸುರರು** – ಮುಖ್ಯ ತತ್ತ್ವಾಭಿಮಾನಿಗಳಲ್ಲದ ಇತರ ದೇವತೆಗಳು.

**ಬೊಮ್ಮನ ಆಣೆ** – ಬ್ರಹ್ಮನಾಣೆ, ಎಂದರೆ ಕಂಡಿತ; ಶಪಥ ಮಾಡಿ ಹೇಳುವ ಬಗೆ.

**ಜಗವು ಸತ್ಯವು ಅಲ್ಲ** – ಜಗತ್ತು ಮಿಥ್ಯೆ.

**ಅಗುಣನು ಪರಬೊಮ್ಮನು** – ಪರಬ್ರಹ್ಮನು ನಿರ್ಗುಣ, ನಿರಾಕಾರ, ಅಗಮ್ಯ ಎಂಬ ವಾದ.

**ಜಗತು... ... ... ಅಗುಣನು ಪರಬೊಮ್ಮನು** – ಅದ್ವೈತ ಶಾಸ್ತ್ರದ ತತ್ವಗಳು

**ನಿಗಮ ಶಾಸ್ತ್ರ** – ವೇದ ಶಾಸ್ತ್ರ

**ಜಗತು ಸಗುಣ ಬ್ರಹ್ಮ:** ದ್ವೈತ ಶಾಸ್ತ್ರದ ಮೂಲ ತತ್ವಗಳು

**ನಿಗಮ ಶಾಸ್ತ್ರದಿ –** ವೈದಿಕ ಪ್ರಮಾಣದಿಂದಲೇ.

**ಹರಿ ಸರ್ವೋತ್ತಮ...** – ಇಲ್ಲಿಂದ ಮುಂದೆ ಎರಡು ನುಡಿಗಳಲ್ಲಿ ದೇವತಾ ತಾರತಮ್ಯವನ್ನು ಹೇಳಿದ್ದಾರೆ.

(ಕಕ್ಷ ೧ ರಿಂದ ೧೦ ನೇ ಕಕ್ಷದ ವರೆಗಿನ ಅವರೋಹಣ ತಾರತಮ್ಯ ಕ್ರಮವು ಬಂದಿದೆ)

**ದ್ವಿಪದಿ** = ಇಂದ್ರ ಮತ್ತು ಕಾಮ

**ಅಪರ್ಣಾ** = ಪಾರ್ವತಿ

**ಅಪವರ್ಗದ** = ಮೋಕ್ಷಕೊಡುವವ, ಶ್ರೀ ಹರಿ

**ಒಂದೊಂದು ಯುಗದಲ್ಲಿ** – ತ್ರೇತಾಯುಗದಲ್ಲಿ ಹನುಮನಾಗಿ (ಇವರು ಸಂಕರ್ಷಣ ನಾಮಕ ಪರಮಾತ್ಮ ಮತ್ತು ಜಯಾ ಎಂಬುವರ ಮಗ), ದ್ವಾಪರಯುಗದಲ್ಲಿ ಭೀಮನಾಗಿ, ಕಲಿಯುಗದಲ್ಲಿ ಮಧ್ವಾಚಾರ್ಯರಾಗಿ ಹರಿ ಸೇವೆಯನ್ನು ನಡೆಸಿದರು.

**ಕ್ರಮ ತತ್ವ** = ತಾರತಮ್ಯ ತತ್ವ

**ಹಿಮಗಿರಿಯಿಂದ ಸೇತುವೆಯ ಪರ್ಯಂತರ ಭ್ರಮಿಸುತ** = ಆಚಾರ್ಯರು ದಿಗ್ವಿಜಯ ಯಾತ್ರೆ

ಗೈಯುತ್ತ ಇಡಿಯ ಭಾರತವನ್ನು ಸುತ್ತಾಡಿದರು. ಹಿಮಾಲಯದಿಂದ ರಾಮೇಶ್ವರದವರೆಗೆ.

**ಕಮಲನಾಭನ ಮೂರ್ತಿ** = ಶ್ರೀ ಕೃಷ್ಣನ ಮೂರ್ತಿ (ಉಡುಪಿ)

**ರೌಪ್ಯ ಪುರ** = ಉಡುಪಿ

**ಮಾಯಾ ಜಯಿಸಿ –** ಮಾಯಾವಾದಿಗಳನ್ನು ಗೆದ್ದು; ಅಥವಾ ಐಕ್ಯಭ್ರಮ, ಸ್ವತಂತ್ರಾತ್ಮ ಭ್ರಮ, ಮೊದಲಾದುವು ಮಾಯೆಯೆನಿಸಿಕೊಳ್ಳುತ್ತವೆ, ಇದನ್ನು ಜಯಿಸಿ.

**ಧಾತ್ರಿ ಮುದ್ರೆ –** ಭೂಸ್ಪರ್ಶಮುದ್ರೆ; ಬಲಗೈಯ ಬೆರಳುಗಳೆಲ್ಲವನ್ನೂ ಭೂಮಿಯ ಕಡೆ ಚಾಚುವುದು.

**ಭವಿಷ್ಯದ ಬ್ರಹ್ಮ** = ವಾಯು, ಶ್ರೀ ಮಧ್ವಾಚಾಚಾರ್ಯರು ವಾಯು ದೇವರ ಅವತಾರವಾದ್ದರಿಂದ ಮುಂದೆ ಬರುವ ಕಲ್ಪದಲ್ಲಿ ಬ್ರಹ್ಮ ಪಟ್ಟಕ್ಕೆ ಏರುವವರು

**ಜೀವೋತ್ತಮ** = ವಾಯು ದೇವರು

**ಯಮಕ ಭಾರತ** – ಮಧ್ವಾಚಾರ್ಯರು ಬರೆದ ಮೂವತ್ತೇಳು ಗ್ರಂಥಗಳಲ್ಲಿ ಒಂದು. ಇದರಲ್ಲಿ 'ಲೌಕಿಕ ಚಿತ್ರ ಕವಿತೆ' ಎಂಬ ಚಮತ್ಕಾರ ಶೈಲಿಯ ರಚನೆ ಕಾಣುತ್ತದೆ. ವಾಸ್ತವವಾಗಿ ಭಾಗವತದ ಕತೆಯೇ ಹೇಳಲ್ಪಟ್ಟಿದ್ದರೂ, ಭಾರತದ ಸಂಕ್ಷೇಪವೂ ಅದರಲ್ಲಿ ಅಡಗಿದೆ. ಎಂಬತ್ತೊಂದು ಶ್ಲೋಕಗಳ ಈ ಗ್ರಂಥ 'ಯಮಕ' ಅಥವಾ ದ್ವಯಾರ್ಥವೆಂಬ ಜಾತಿಗೆ ಸೇರಿದ ರಚನೆ.

**ಅಪವರ್ಗದನ** – ಅಪವರ್ಗ (ಮೋಕ್ಷವನ್ನು) ದ (ದಯಪಾಲಿಸುವವ)ನ.

**ಈ ಕೀರ್ತನೆಯಲ್ಲಿ ಕಕ್ಷ ತಾರತಮ್ಯ:**

| | |
|---|---|
| ೧. ಪರಮಾತ್ಮ (ಸರ್ವೋತ್ತಮ) | ಕಕ್ಷ ೧ |
| ೨. ರಮಾ ದೇವಿ | ಕಕ್ಷ ೨ |
| ೩. **ವಿಧಿ** = ಬ್ರಹ್ಮ ಮತ್ತು **ಪ್ರಾಣ** = ವಾಯು | ಕಕ್ಷ ೩ |
| ೪. ಸರಸ್ವತಿ - ಭಾರತಿ | ಕಕ್ಷ ೪ |
| ೫. ಗರುಡ, ಅನಂತ (ಶೇಷ), ರುದ್ರ | ಕಕ್ಷ ೫ |
| ೬. ಆರು ದೇವಿಯರು | ಕಕ್ಷ ೬ |
| (ಕೃಷ್ಣನ ಷಣ್ಮಹಿಷಿಯರು - ಜಾಂಬವತಿ, ಭದ್ರಾ, ನೀಲಾ, ಕಾಳಿಂದಿ, ಮಿತ್ರವಿಂದಾ, ಲಕ್ಷಣಾ) | |
| ೭. ಸೌಪರ್ಣಿ, ವಾರುಣಿ, ಅಪರ್ಣಾ | ಕಕ್ಷ ೭ |
| ೮. ಇಂದ್ರ, ಕಾಮ (ದ್ವಿಪದಿ) | ಕಕ್ಷ ೮ |
| ೯. ಅಹಂಕಾರಿಕ ಪ್ರಾಣ ದೇವರು | ಕಕ್ಷ ೯ |
| ೧೦. ಮನ್ವಾದಿಗಳು | ಕಕ್ಷ ೧೦ |

**Classification:** Keerthane
**Ankita:** purandara vittala
**Location:** NA
**Category:** Taratamya, Madhvacharyara Stuti
**Group Words:** madhva, Ananda, brahmana, jiva, jada, rama, devi, Ananta, saraswati, garuda, vidhi, prana, sura, satya, japa, yuga, daiva, padma, puje, taratamya, kaksha,
**Pravachana:** NA

**Explanation:** NA